**ಮಹಿಳಾದಿನ**
**ವಿಶೇಷ**

**ಈ ಜಗತ್ತು** ಇಷ್ಟೊಂದು ಸುಂದರವಾಗಿರಲು, ಅರ್ಥಪೂರ್ಣವಾಗಿರಲು ಹಾಗೂ ಬದುಕಲಿಕ್ಕೆ ಸಹ್ಯವಾಗಿರಲು ಕಾರಣ ಏನು? ಹೆಣ್ಣಲ್ಲದೆ ಬೇರೆ ಉತ್ತರವಿರಲು ಸಾಧ್ಯವೆ? ಭಾರತೀಯ ಸಂದರ್ಭದಲ್ಲಂತೂ ಹೆಣ್ಣು ದೇವಿ, ಶಕ್ತಿ–ಶಾರದೆಯ ಮೇಳ. ಸೃಷ್ಟಿಶೀಲ ಚೈತನ್ಯದ ಕಾರಣದಿಂದಲೇ ಹೆಣ್ಣನ್ನು ಪ್ರಕೃತಿಯೊಂದಿಗೆ ಸಮೀಕರಿಸಲಾಗುತ್ತದೆ. ಈ ಬಣ್ಣನೆಯ ಇನ್ನೊಂದು ತುದಿಗೆ, ಮನುಕುಲದ ಇತಿಹಾಸದುದ್ದಕ್ಕೂ ಮಹಿಳೆ ಸಮಾನತೆಗಾಗಿ ಹಂಬಲಿಸುತ್ತಲೇ ಇರುವುದು ಕಾಣಿಸುತ್ತದೆ. ಪುರುಷಪ್ರಧಾನ ಸಮಾಜದಲ್ಲಿ ಅವಳ ಧ್ವನಿ ಎಲ್ಲ ಕಾಲಗಳಲ್ಲೂ ಕ್ಷೀಣವಾಗಿ ಅನುರಣಿಸುತ್ತಿದೆ. ಸ್ತ್ರೀ–ಪುರುಷ ಸಮಾನತೆ ಎನ್ನುವುದು ಆದರ್ಶವಾಗಿಯಷ್ಟೇ ಉಳಿದಿದೆ. ಸ್ತ್ರೀ ಅನನ್ಯತೆಯನ್ನು ಪ್ರತಿಪಾದಿಸುವ ಹಾಗೂ ಸಮಾನತೆಯ ಹಂಬಲದ 'ಮಹಿಳಾವಾದ' ಕೂಡ ಕುಂಟುತ್ತಲೇ ಸಾಗಿದೆ. ಭೂಗೋಳ ಒಂದು ಹಳ್ಳಿಯಂತಾಗಿರುವ, ಬ್ರಹ್ಮಾಂಡ ಚಲನೆಗಳೆಲ್ಲ ಬೆರಳತುದಿಗೆ ಬಂದು ನಿಂತಂತೆ ಕಾಣಿಸುತ್ತಿರುವ ವರ್ತಮಾನದಲ್ಲೂ ಮಹಿಳೆಯರ ಸ್ಥಿತಿ ಸಮಾಧಾನಪಡುವಂತೇನೂ ಇಲ್ಲ. ಇಂಥ ಸಂದರ್ಭದಲ್ಲೂ ಈ ಕಾಲದ ಮಹಿಳೆಯರು ತಮ್ಮ ದಿಟ್ಟತನ ಹಾಗೂ ಅಪೂರ್ವ ಪ್ರತಿಭೆಯಿಂದ ಸಮಾಜದಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಅಷ್ಟು ಮಾತ್ರವಲ್ಲ, ಇತಿಹಾಸ–ಪರಂಪರೆ ರೂಢಿಸಿಕೊಟ್ಟ ಸಿದ್ಧ ಮಾದರಿಯ ಸ್ತ್ರೀ ಪರಿಕಲ್ಪನೆಗಳನ್ನು ಒಡೆಯುತ್ತಿದ್ದಾರೆ. ಹಾಗಾದರೆ ಈ ಹೊತ್ತಿನ ಹೆಣ್ಣಿನ ಲಕ್ಷಣಗಳೇನು? ಆಕೆ ಎದುರಿಸುತ್ತಿರುವ ಸವಾಲುಗಳೇನು? ಮಹಿಳಾಲೋಕದಲ್ಲಿ ಆಗಿರುವ, ಆಗಬೇಕಾದ ಬದಲಾವಣೆಗಳೇನು? ಇಂಥ ಪ್ರಶ್ನೆಗಳ ನೆಪದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಹೆಸರುಮಾಡಿರುವ ಯುವ ಕನ್ನಡತಿಯರು 'ಸುಧಾ ಬಳಗ'ದೊಂದಿಗೆ ತಮ್ಮ ವಿಚಾರಗಳನ್ನು ಹಂಚಿಕೊಂಡಿದ್ದಾರೆ. **ಇದು, ಮಾರ್ಚ್ 8ರ 'ಮಹಿಳಾ ದಿನ'ದ ವಿಶೇಷ.**



ಸಾಂದರ್ಭಿಕ ಚಿತ್ರ:
ಸಂಯುಕ್ತಾ ಹೊರನಾಡು